

# ಬಿದಿರಿನ ಕದಿರು

## ಅರವತ್ತು ವರ್ಷಕ್ಕೊಮ್ಮೆ ಅರಳುವ ಹೂವು

ಪಶ್ಚಿಮ ಘಟ್ಟದ ಪರಿಸರ ತನ್ನ ಒಡಲಿನಲ್ಲಿ ಅಪರೂಪದ ಸಸ್ಯ ಪ್ರಭೇದಗಳನ್ನು ಇರಿಸಿಕೊಂಡಿದೆ. ಹಾಗೆಯೇ ಅಪರೂಪದ ಜೀವ ಜಗತ್ತಿನ ನೆಲೆ ಬೀಡಾದ ಇಲ್ಲಿಯ ಅರಣ್ಯಗಳು ಸೃಷ್ಟಿ ಜಗತ್ತಿನ ಅನೇಕ ಸವಾಲುಗಳನ್ನು ಎದುರಿಸಿ ನಿಂತಿವೆ.

ವರ್ತಮಾನದ ಪರಿಸರದ ಅಸಮತೋಲನವೂ ಅರಣ್ಯದ ಕ್ಷೀಣಿಸುವಿಕೆಗೆ ಕಾರಣವಾಗಿರಬಹುದು. ಸಾಂಪ್ರದಾಯಿಕವಾಗಿ ಕಾಡಿನಲ್ಲಿ ಅನೇಕ ವರ್ಷಗಳಿಂದ ಮುಗಿಲೆತ್ತರಕ್ಕೆ ಬೆಳೆದು ನಿಂತ ಹಸಿರು ಬಿದಿರು ಹೂ ಬಿಡಲಾರಂಭಿಸಿದರೆ, ಹಿರಿಯರಲ್ಲಿ ಏನೋ ಆತಂಕ. ಭವಿಷ್ಯದ ಬೇಸಿಗೆ ಭಯಾನಕವಾಗಿ ಕಾಡುವ, ನೀರಿಲ್ಲದೆ ಬರಗಾಲದ ಬವಣೆ ಎದುರಾಗುವ ಸಂಭವನೀಯತೆಯ ಆತಂಕದ ಲೆಕ್ಕಾಚಾರಗಳು ಎಣಿಕೆಯ ಕ್ರಮಾಂಕಕ್ಕೆ ಜೋತು ಬೀಳುತ್ತದೆ. ಉರಿ ಬೇಸಿಗೆಯಲ್ಲಿ ಉತ್ತರಕನ್ನಡದ ಯಲ್ಲಾಪುರ ತಾಲ್ಲೂಕಿನ ಬೇಡ್ತಿ, ಕಾಳಿ ಕಣಿವೆಯಲ್ಲಿ, ಅರಬೈಲು ಘಾಟಿ ಪ್ರದೇಶಗಳಲ್ಲಿ ಇದೀಗ ಹಾಗೆ ಬಿದಿರು ಸಂಖ್ಯೆ ಕಡಿಮೆಯಾಗಿದೆ. ಮೊದಲೇ ಮಳೆಯ ಕೊರತೆ ಎದುರಿಸುತ್ತಿರುವ ಈ ಭಾಗಗಳಲ್ಲಿ ಇದ್ದ ಅಲ್ಪ ಸ್ವಲ್ಪ ಬಿದಿರು ಕೂಡ ಇದೀಗ ಮುಗಿಲೆತ್ತರಕ್ಕೆ ಹೂ ಬಿಟ್ಟು ಬರಗಾಲಕ್ಕೆ ಸಿಂಗಾರಗೊಂಡಿದೆ.

ಬಿದಿರು ಹೂವು ಬಿಟ್ಟ ಮೇಲೆ ಇಲಿಗಳು ಬಿದಿರಕ್ಕಿ ತಿಂದು ತಮ್ಮ ಸಂಖ್ಯೆಯನ್ನು ವೃದ್ಧಿಸಿಕೊಳ್ಳುತ್ತವೆ ಎನ್ನುವ ನಂಬಿಕೆ ಗ್ರಾಮೀಣ ಭಾಗದಲ್ಲಿದೆ. ಬರಗಾಲದಲ್ಲಿ ಬಿದಿರಕ್ಕಿಯನ್ನೇ ತಿಂದು ತಮ್ಮ ಹಸಿವನ್ನು ಆದಿವಾಸಿಗಳು ನೀಗಿಕೊಳ್ಳುವುದು ಇಂದಿಗೂ ಚಾಲ್ತಿಯಲ್ಲಿದೆ. ಐವತ್ತು ಅಥವಾ ಅರವತ್ತು ವರ್ಷಗಳಿಗೊಮ್ಮೆ ಈ ಕಟ್ಟೆರೋಗದ ಭೀತಿ ಎದುರಿಸುವ ಹಸಿರು ಬಿದಿರು ಹಿಂಡುಗಳು ಇದೀಗ ಸಹ್ಯಾದ್ರಿ ಪರ್ವತ ಶ್ರೇಣಿಗಳಲ್ಲಿ ಖಾಲಿಯಾಗುವ ಮೂಲಕ ಸಸ್ಯ ಕ್ಷೇತ್ರಕ್ಕೊಂದು ದೊಡ್ಡ ನಷ್ಟವಾಗುವ ಸಂಭವನೀಯತೆ ಗಾಢವಾಗಿದೆ. ಅರಣ್ಯದಲ್ಲಿ ವನ್ಯಜೀವಿಗಳಾದ ಜಿಂಕೆ, ಕಡವೆ, ಕಾಡುಕೋಣ, ಆನೆ ಮುಂತಾದ ಜೀವಿಗಳಿಗೆ ಬಿದಿರು ಬಹುಮುಖ್ಯವಾದ ಆಹಾರವಾಗಿದ್ದು, ಬಿದಿರುಕಟ್ಟೆಯಿಂದ ವನ್ಯಜೀವಿಗಳ ಆಹಾರಕ್ಕೂ ಕ್ಷಾಮ ಬಂದ ಹಾಗಿದೆ.

ಹಿಂದೆ ಕೃಷಿ ಉಪಕರಣಗಳನ್ನು ಈ ಹಸಿರು ಬಿದಿರಿನಿಂದ ಮಾಡುತ್ತಿದ್ದು ಮನೆ, ಕೊಟ್ಟಿಗೆ ಸೇರಿದಂತೆ, ಕಡಿಕೆ, ಗೋಡೆ, ಬುಟ್ಟಿ, ಆಹಾರ ಧಾನ್ಯ ಅಳೆಯುವ ಮಾಪನವಾಗಿ ಅನೇಕ ವಸ್ತುಗಳ ತಯಾರಿಕೆಯಲ್ಲಿ ಬಿದಿರು ಸಸ್ಯದ ಬಳಕೆ ಹೇರಳವಾಗಿತ್ತು.

■ ದತ್ತಾತ್ರೇಯ ಭಟ್ಟ, ಕಣ್ಣಿಪಾಲ